ಕರ್ನಾಟಕ ಸರ್ಕಾರ
Government of Karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpl.dsert-ka@nic.in Website: http://dsert.kar.nic.in

Phone - 080 26980100
Fax - 080 26422377

ಡಿಎಸ್ಇಆರ್‌ಟಿ
DSERT

ಸಂಖ್ಯೆ: ಡಿಎಸ್‌ಇಆರ್‌ಟಿ/ಎಸ್.ಎಸ್.ಕೆ/ಪ್ರಾ/ನಿಷ್ಠಾ-3.0 ಅ/04/2021-22 ದಿನಾಂಕ: 07.04.2022

## ಜ್ಞಾಪನ

**ವಿಷಯ:** ರಾಜ್ಯದ ಎಲ್ಲಾ ಖಾಸಗಿ/ಅನುದಾನರಹಿತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ NCERT ವತಿಯಿಂದ ನೀಡುತ್ತಿರುವ ನಿಷ್ಠಾ-3.0 ತರಬೇತಿಯನ್ನು ಪಡೆದುಕೊಳ್ಳುವ ಬಗ್ಗೆ.

**ಉಲ್ಲೇಖ:** ಶ್ರೀ ಮನೀಷ್ ಗಾರ್ಗ್, ಜಂಟಿ ಕಾರ್ಯದರ್ಶಿ, ಶಿಕ್ಷಣ ಸಚಿವಾಲಯ, ನವದೆಹಲಿ ರವರ ಪತ್ರ ಸಂಖ್ಯೆ: 01-02/2022-IS-13, ದಿನಾಂಕ: 07.03.2022.

******

Kiran Raghupathi

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದನ್ವಯ, ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಪ್ರೌಢ ಶಿಕ್ಷಣ ಹಂತದವರೆಗೂ ಎಲ್ಲಾ ಮಕ್ಕಳು ಶಿಕ್ಷಣದ ಸಾರ್ವತ್ರೀಕರಣ ಹಕ್ಕನ್ನು ಹೊಂದಬೇಕು ಎಂಬುವುದಕ್ಕೆ ರಾಷ್ಟ್ರೀಯ ಶಿಕ್ಷಣ ನೀತಿ-2020 ಬದ್ಧವಾಗಿದೆ. ಶಾಲಾ ಶಿಕ್ಷಣದ ಸ್ವರೂಪದ ಪುನರ್‌ರಚನೆಯು ಎಲ್ಲಾ ವಲಯಗಳಲ್ಲಿ 5+3+3+4 ರ ಪ್ರಕಾರ ಶಿಫಾರಸ್ಸು ಮಾಡಿದ್ದು, ಮೊದಲ ಹಂತದ ಐದು ವರ್ಷವನ್ನು ಬುನಾದಿ ಹಂತವೆಂದು ಪರಿಗಣಿಸಲಾಗಿದೆ. ಈ ನಿಟ್ಟಿನಲ್ಲಿ ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾ ಸಾಮರ್ಥ್ಯವನ್ನು ಗಳಿಸಲು ವ್ಯವಸ್ಥಿತವಾದ ಸುಧಾರಣೆ ಹಾಗೂ ಶೈಕ್ಷಣಿಕ ಮಾರ್ಗ ಸೂಚಿಯನ್ನು ಮಕ್ಕಳಿಗೆ ರೂಪಿಸಲಾಗುತ್ತಿದೆ.

ಈ ಸಂಬಂಧ (Nipun Bharat) National Initiative for Proficiency in Reading with Understaning and Numeracy ಎಂಬ ಮಿಷಯವನ್ನು ಭಾರತ ಸರ್ಕಾರವು ಜುಲೈ 5 2021 ರಂದು ಉದ್ಘಾಟಿಸಲಾಗಿದೆ. ಇದರನ್ವಯ ಪ್ರತಿಯೊಂದು ಮಗುವು 3ನೇ ತರಗತಿ ಅಂತ್ಯದೊಳಗೆ ಅಂದರೆ 2026-27ರೊಳಗೆ ಅಪೇಕ್ಷಿತ ಕಲಿಕಾ ಸಾಮರ್ಥ್ಯವನ್ನು ಓದುವುದರಲ್ಲಿ, ಬರೆಯುವುದರಲ್ಲಿ ಮತ್ತು ಸಾಮರ್ಥ್ಯದಲ್ಲಿ ಖಚಿತ ಪಡಿಸಿಕೊಳ್ಳುವುದು. ಈ ಸಾಧನೆಯು ಮಗುವು ದಾಖಲೆ ಹೊಂದಿದ ಸರ್ಕಾರಿ/ಅನುದಾನಿತ/ಅನುದಾನರಹಿತವೇ ಆಗಿರಲಿ ಮಕ್ಕಳ ಕಲಿಕೆಯ ಪ್ರಗತಿಯನ್ನು ನಿರಂತರವಾಗಿ ಶಾಲಾ ಆಧಾರಿತ ಮೌಲ್ಯ ಮಾಪನದಲ್ಲಿ School Based Assessment (SBA) ಮೇಲ್ವಿಚಾರಣೆ, ಮೇಲುಸ್ತುವಾರಿಯನ್ನು ನೋಡಿಕೊಂಡು ರಾಷ್ಟ್ರೀಯ ಸಾಧನೆಯ ಸಮೀಕ್ಷೆ ಹಾಗೂ ಇತರೆ ಸ್ಯಾಂಪಲಿಂಗ್ ಸಮೀಕ್ಷೆಗಳ ಮುಖಾಂತರ ನಿರಂತರವಾಗಿ ಶಾಲೆಗಳಲ್ಲಿ ಅನುಷ್ಠಾನಗೊಳಿಸುತ್ತಿರಬೇಕು.

ಇಲ್ಲಿಯವರೆಗೆ ನಿಪುಣ್ ಮಿಷನ್ ಅಡಿಯಲ್ಲಿ ಕೈಗೊಂಡಿರುವಂತಹ ಕ್ರಮಗಳು:

1. ನಿಪುಣ್ ಭಾರತ್ ಮಿಷನ್‌ನ ಮಾರ್ಗಸೂಚಿಯನ್ನು ಬಿಡುಗಡೆಗೊಳಿಸಲಾಗಿದೆ.
2. ದೀಕ್ಷಾ (FLN) ಪೋರ್ಟಲ್‌ಗಳ ಸುಲಭವಾಗಿ ಲಭ್ಯವಾಗುವಂತೆ (FLN) ಕೋರ್ಸ್‌ಗಳ ಪರಿಚಯ.
3. ವಿದ್ಯಾ ಪ್ರವೇಶ ಕಾರ್ಯಕ್ರಮದ ಉದ್ಘಾಟನೆ (ಗ್ರೇಡ್-1 ಮಾರ್ಗದರ್ಶಿ ಮತ್ತು ಮಾಡ್ಯೂಲ್‌ಗಳು)
4. ನಿಷ್ಠಾ-3.0 ಕೋರ್ಸ್‌ಗಳನ್ನು ಲಾಂಚ್ ಮಾಡಲಾಗಿದೆ.

Kiran Raghupathi

5. ಮಕ್ಕಳಿಗಾಗಿ ಓದುವಿಕೆಯನ್ನು ಉತ್ತೇಜಿಸಲು 100 ದಿನಗಳ ಓದುವಿಕೆಯ ಅಭಿಯಾನವನ್ನು ಆಯೋಜಿಸಲಾಗಿದೆ.
6. ಮಕ್ಕಳ ಕಲಿಕೆಗೆ ಪೂರಕವಾಗುವಂತೆ ಪರ್ಯಾಯ ಶೈಕ್ಷಣಿಕ ಕ್ಯಾಲೆಂಡರ್‌ನ್ನು ಅಭಿವೃದ್ಧಿಪಡಿಸಲಾಗಿದೆ.
7. ಶಿಕ್ಷಕರು ಮತ್ತು ಮಕ್ಕಳಿಗಾಗಿ ಕಲಿಕಾ ಫಲಗಳಂತೆ ಇ-ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲಾಗಿದೆ.
8. ನಿಪುಣ್ ಭಾರತ್ ಮಿಷನ್‌ನ ಗುರಿಯು ಸಾಧನೆಯಾಗುವಂತೆ ಮಿಷನ್‌ನ ಅಭಿವೃದ್ಧಿಪಡಿಸಲಾಗಿದೆ.

ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸರ್ಕಾರಿ ಅನುದಾನಿತ ಹಾಗೂ ಖಾಸಗಿಯವರು, ಎಲ್ಲಾ ಪ್ರಕಾರದ ಶಾಲೆಗಳು ಒಳಗೊಳ್ಳುವಂತೆ ನಿಪುಣ್ ಭಾರತ್ ಮಿಷನ್‌ನ ಗುರಿಯನ್ನು ಸಾಧಿಸುವುದು ಹಾಗೂ (FLN) ಸಂಪನ್ಮೂಲಗಳು ವ್ಯಾಪಕವಾಗಿ ಹಂಚಿಕೊಳ್ಳುವಂತೆ ತಿಳಿಸಿರುತ್ತಾರೆ.

ನಿಪುಣ್ ಭಾರತ್ ಉಪಕ್ರಮಗಳನ್ನು ಎಲ್ಲಾ ರೀತಿಯ ಶಾಲೆಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಬ್ಲಾಕ್, ಜಿಲ್ಲಾ ಹಂತಗಳಲ್ಲಿ ಬಿ.ಆರ್.ಸಿ., ಹಾಗೂ ಸಿ.ಆರ್.ಸಿಗಳ ಪ್ರೋಗ್ರಾಮರ್ಸ್‌ಗಳು ಉಸ್ತುವಾರಿ ವಹಿಸಿಕೊಳ್ಳುವುದು. ರಾಜ್ಯಹಂತದಲ್ಲಿ ಏನಾದರೂ ಸಮಸ್ಯೆಗಳಿದ್ದಲ್ಲಿ nishtha.karnataka@gmail.com ಗೆ ಕಳುಹಿಸುವುದು.

ನಿಷ್ಠಾ-3.0 ತರಬೇತಿಯ 12 ಕೋರ್ಸ್‌ಗಳಿಗೆ ಇಲ್ಲಿಯವರೆಗೂ ಲಾಗಿನ್/ಎನ್‌ರೋಲ್ ಆಗದ ಮತ್ತು ಪ್ರಮಾಣಪತ್ರ ಪಡೆಯದ ಶಿಕ್ಷಕರಿಗೆ/ಮೇಲುಸ್ತುವಾರಿ ಅಧಿಕಾರಿಗಳಿಗೆ ಇದೇ ಕಡೆಯ ಅವಕಾಶವಾಗಿದೆ. ಖಾಸಗಿ/ಅನುದಾನರಹಿತ ಶಿಕ್ಷಕರೂ ಸಹ Gmail ಲಾಗಿನ್ ಬಳಸಿ ನೋಂದಾಯಿಸಿಕೊಂಡು ಕೋರ್ಸ್ ಪೂರ್ಣಗೊಳಿಸಿ ಪ್ರಮಾಣ ಪತ್ರ ಪಡೆಯುವುದು. ಕೊನೆಯ ದಿನಾಂಕ:31.05.2022 ಆಗಿರುತ್ತದೆ ಎಂದು ತಿಳಿಸಿದೆ.

(ಸಹಿ)
ನಿರ್ದೇಶಕರು
ಡಿ.ಎಸ್.ಇ.ಆರ್.ಟಿ
ಬೆಂಗಳೂರು
(ಸಹಿ) 7/4/22

ಗೆ,

1. ರಾಜ್ಯದ ಎಲ್ಲಾ 34 ಡಯಟ್‌ಗಳ ಪ್ರಾಂಶುಪಾಲರಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಇವರಿಗೆ ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು,

1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರಿಗೆ ಮಾಹಿತಿಗಾಗಿ
2. ಕಛೇರಿ ಪ್ರತಿ

Kiran Raghupathi
d:\15-94\y 2022-2023\nishtha-3.0\letter nishtha-3.0.docx